ಹಾಸನ ನಗರದ ರೆಗ್ಯುಲೇಟೆಡ್ ಮಾರ್ಕೆಟ್ ಆಯವ್ಯಯದ ಬಗ್ಗೆ

೬೭೧. ಶ್ರೀ ಕೆ. ಹೆಚ್. ಹನುಮೇಗೌಡ (ಹಾಸನ).—ಮಾನ್ಯ ಸಹಕಾರ ರಾಜ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ;

ಅ) ೧೯೮೭–೮೮, ೧೯೮೮–೮೯ ಮತ್ತು ೧೯೮೯–೯೦ರಲ್ಲಿ ಹಾಸನ ರೆಗ್ಯುಲೇಟೆಡ್ ಮಾರುಕಟ್ಟೆ ಸಮಿತಿಗೆ ಬಂದ ಆದಾಯವೆಷ್ಟು ;

(ವರ್ಷವಾರು ಮಾಹಿತಿ ಕೊಡುವುದು)

ಆ) ಈ ಆದಾಯದಲ್ಲಿ ಯಾವ ಯಾವ ಬಾಬಿಗೆ ಎಷ್ಟೆಷ್ಟು ಖರ್ಚಾಗಿದೆ?

ಶ್ರೀ ಹೆಚ್. ಆರ್. ರಾಜು (ಸಹಕಾರ ರಾಜ್ಯ ಮಂತ್ರಿಗಳು).—

ಅ)

	ವರ್ಷ	ಆದಾಯ
೧	೧೯೮೭–೮೮	ರೂ. ೯,೨೦,೫೨೬–೦೦
೨	೧೯೮೮–೮೯	ರೂ. ೧೦,೭೯,೦೯೨–೦೦
೩	೧೯೮೯–೯೦	ರೂ. ೧೪,೭೭,೫೨೩–೦೦

(ಜುಲೈ ೮೯ರಿಂದ ಏಪ್ರಿಲ್ ೯೦ರ ವರೆಗೆ—೧೦ ತಿಂಗಳು)

ಆ)

	ವಾರ್ಷಿಕ ಖರ್ಚು	
	೧೯೮೭–೮೮	
೧)	ರಾಜ್ಯ ಸಂಚಿತ ನಿಧಿಗೆ ವಂತಿಗೆ :	ರೂ. ೪,೨೪,೨೦೪–೦೦
೨)	ಕರ್ನಾಟಕ ರಾಜ್ಯ ಕೃಷಿ ಮಾರಾಟ ಮಂಡಳಿಗೆ	ರೂ. ೪೨,೪೨೦–೦೦
೩)	ಅಭಿವೃದ್ಧಿ ಮತ್ತು ಇತರೆ ಖರ್ಚು	ರೂ. ೧,೯೮,೨೪೫–೦೦
	೧೯೮೮–೮೯	
೧)	ರಾಜ್ಯ ಸಂಚಿತ ನಿಧಿಗೆ ವಂತಿಗೆ	ರೂ. ೪,೫೨,೬೬೫–೦೦
೨)	ಕರ್ನಾಟಕ ರಾಜ್ಯ ಕೃಷಿ ಮಾರಾಟ ಮಂಡಳಿಗೆ	ರೂ. ೪೮,೬೭೪–೦೦
೩)	ಅಭಿವೃದ್ಧಿ ಮತ್ತು ಇತರೆ ಖರ್ಚು	ರೂ. ೨,೭೨,೭೦೬–೦೦
	೧೯೮೯–೯೦	
೧)	ರಾಜ್ಯ ಸಂಚಿತ ನಿಧಿಗೆ ವಂತಿಗೆ	ರೂ. ೪,೨೯,೪೫೨–೦೦
೨)	ಕರ್ನಾಟಕ ರಾಜ್ಯ ಕೃಷಿ ಮಾರಾಟ ಮಂಡಳಿಗೆ	ರೂ. ೩೭,೪೫೫–೦೦
೩)	ಅಭಿವೃದ್ಧಿ ಮತ್ತು ಇತರೆ ಖರ್ಚು	ರೂ. ೫,೬೭,೭೫೬–೦೦

(ಜುಲೈ ೮೯ ರಿಂದ ಏಪ್ರಿಲ್ ೯೦ರವರೆಗೆ)

ಭೂಸುಧಾರಣೆ ಅಪಲೇಟ್ ಟ್ರಿಬ್ಯೂನಲ್ ಬಗ್ಗೆ

೬೭೨. ಶ್ರೀ ಬಿ. ಎನ್. ಯಡಿಯೂರಪ್ಪ (ಶಿಕಾರಿಪುರ).— ಮಾನ್ಯ ಕಂದಾಯ ಮಂತ್ರಿ ಕಾರ್ಮಿಕ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಭೂ ಸುಧಾರಣೆ ಅಪಲೇಟ್ ಟ್ರಿಬ್ಯೂನಲ್‌ಗಳನ್ನು ರದ್ದು ಮಾಡಿದ್ದು, ಮೇಲ್ಮನವಿ ಬಗ್ಗೆ ಬೇರೆ ಯಾವ ವ್ಯವಸ್ಥೆ ಮಾಡಲಾಗುವುದು ;

ಅ) ಭೂ ಸುಧಾರಣಾ ವಿಚಾರಣೆಗಾಗಿ ತಾಲ್ಲೂಕು ಕಮಿಟಿಗಳ ಕಾರ್ಯ ನಿರ್ವಹಣೆ ಬಗ್ಗೆ ಸರ್ಕಾರವು ಏನು ಕ್ರಮ ಕೈಗೊಂಡಿದೆ ?

ಶ್ರೀ ಕೆ.ಹೆಚ್. ಪಾಟೀಲ್ (ಕಂದಾಯ ಮತ್ತು ಕಾರ್ಮಿಕ ಮಂತ್ರಿಗಳು).—

ಅ) ಭೂ ಸುಧಾರಣಾ ಮೇಲ್ಮನವಿ ಪ್ರಾಧಿಕಾರಗಳನ್ನು ರದ್ದು ಮಾಡಲು ಸರ್ಕಾರ ತೀರ್ಮಾನಿಸಿದೆ. ಈ ತೀರ್ಮಾನದಂತೆ ಕಾನೂನನ್ನು ತಿದ್ದುಪಡಿ ಮಾಡಿದರೆ ಮೇಲ್ಮನವಿಗೆ ಅವಕಾಶ ವಿರುವುದಿಲ್ಲ.

ಆ) ಎಲ್ಲಾ ತಾಲ್ಲೂಕುಗಳಿಗೂ ಭೂ ಸುಧಾರಣಾ ನ್ಯಾಯ ಮಂಡಲಿಗಳನ್ನು ರಚಿಸಲಾಗಿದೆ. ಅವುಗಳನ್ನು ಪುನರಚಿಸಿ ಕಾರ್ಯ ನಿರ್ವಹಣೆ ಮಾಡಲು ಕಾರ್ಯೋನ್ಮುಖಗೊಳಿಸಲಾಗುವುದು.

ರಾಜ್ಯ ದಿನಗೂಲಿ ನೌಕರರ ಬಗ್ಗೆ

೫೫೭. ಶ್ರೀ ಬಿ.ಎಸ್. ಯಡಿಯೂರಪ್ಪ (ಶಿಕಾರಿಪುರ).— ಮಾನ್ಯ ಮುಖ್ಯ ಮಂತ್ರಿಯವರಂ ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯದಲ್ಲಿರುವ ದಿನಗೂಲಿ ನೌಕರರ ಸಂಖ್ಯೆ ಎಷ್ಟು ? ಈ ದಿನಗೂಲಿ ನೌಕರರನ್ನು ಖಾಯಂ ಮಾಡುವ ಬಗ್ಗೆ ಸರ್ಕಾರವು ಏನು ಕ್ರಮ ಕೈಗೊಂಡಿದೆ ?

ಆ) ಈ ದಿನಗೂಲಿ ನೌಕರರನ್ನು ಖಾಯಂಗೊಳಿಸಲಂ ಸುಪ್ರೀಂ ಕೋರ್ಟ್ ಆದೇಶ ನೀಡಿ ವಂರೂರು ತಿಂಗಳಾದರೂ ಖಾಯಂ ಗೊಳಿಸದಿರಲು ಕಾರಣವೇನಂ ?

ಇ) ಈ ನೌಕರರನ್ನು ಖಾಯಂಗೊಳಿಸುವ ಬಗ್ಗೆ ಈ ಸರ್ಕಾರದ ಸ್ಪಷ್ಟ ನಿಲುವೇನು ?

ಶ್ರೀ ವೀರೇಂದ್ರ ಪಾಟೀಲ್ (ಮುಖ್ಯ ಮಂತ್ರಿಗಳು).—

ಅ) ಸುಮಾರು ೬೫,೦೦೦ ಸರ್ವೋಚ್ಚ ನ್ಯಾಯಾಲಯವು ನೀಡಿದ ತೀರ್ಪಿಗೆ ಅನುಸಾರ ಕ್ರಮ ತೆಗೆದುಕೊಳ್ಳಲಾಗುತ್ತಿದೆ.

ಆ) ಸರ್ವೋನ್ನತ ನ್ಯಾಯಾಲಯದ ಆದೇಶವು ಸರ್ಕಾರಕ್ಕೆ ದಿನಾಂಕ ೧೨-೩-೧೯೯೦ ರಂದು ತಲುಪಿದೆ. ಸರ್ವೋನ್ನತ ನ್ಯಾಯಾಲಯವು ತನ್ನ ಆದೇಶದಲ್ಲಿ ನೀಡಿರುವ ಮಾರ್ಗಸೂಚಿಗಳನ್ನು ಪರಿಶೀಲಿಸಬೇಕಾಗಿದ್ದುದರಿಂದ ಮತ್ತು ಕೆಲವೊಂದು ಆಡಳಿತಾತ್ಮಕ ಮಾರ್ಗಸೂಚಿಗಳನ್ನು ಅನುಸರಿಸ ಬೇಕಾಗಿರುವುದರಿಂದ ಆದೇಶ ಹೊರಡಿಸಲು ಸಾಧ್ಯವಾಗಲಿಲ್ಲ.

ಇ) ಈ ಬಗ್ಗೆ ಸಧ್ಯದಲ್ಲೇ ಆದೇಶ ಹೊರಡಿಸಲಾಗುವುದು.

ಒಣ ಕೊಬ್ಬರಿ ಬೆಲೆ ತೀವ್ರವಾಗಿ ಕುಸಿದಿರುವ ಬಗ್ಗೆ

೬೨೯. ಶ್ರೀ ಬಿ.ಎಸ್. ಯಡಿಯೂರಪ್ಪ (ಶಿಕಾರಿಪುರ).—ಮಾನ್ಯ ಸಹಕಾರ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಈ ಸಾರಿ ಒಣಕೊಬ್ಬರಿ ಬೆಲೆ ತೀವ್ರವಾಗಿ ಕುಸಿದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಆ) ಹಾಗಿದ್ದಲ್ಲಿ ಇದಕ್ಕೆ ಕಾರಣಗಳೇನು ?

ಇ) ಕಳೆದ ೩ ವರ್ಷಗಳಲ್ಲಿ ಪ್ರತಿ ವರ್ಷ ರೈತರಿಂದ ಮಾರುಕಟ್ಟೆಗೆ ಬರುತ್ತಿದ್ದ ಮತ್ತು ಮಾರಾಟ ವಾಗುತ್ತಿದ್ದ ಕೊಬ್ಬರಿ ಎಷ್ಟು ?

ಈ) ಕಳೆದ ೩ ವರ್ಷಗಳಲ್ಲಿ ಏಪ್ರಿಲ್, ಮೇ ತಿಂಗಳಲ್ಲಿದ್ದ ಕೊಬ್ಬರಿ ಬೆಲೆ ಎಷ್ಟು ?

ಉ) ಬೆಲೆ ಇಳಿತದಿಂದ ರೈತರಿಗೆ ಉಂಟಾಗಿರುವ ನಂಕಷ್ಟ ಪರಿಹರಿಸಲು ಸರ್ಕಾರ ಕೈಗೊಂಡಿರುವ ಕ್ರಮವೇನು ?

ಶ್ರೀ ಹೆಚ್.ಆರ್. ರಾಜು (ಸಹಕಾರ ರಾಜ್ಯ ಸಚಿವರು).—

ಅ) ಹೌದು.